ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಪಟ್ಟಣ – 5961
ಗ್ರಾಮಾಂತರ – 15147
ಒಟ್ಟು – **21108**

ಆ) ಹೌದು

21,108ರಲ್ಲಿ 65 ಅನರ್ಹ ಫಲಾನುಭವಿಗಳೆಂದು ದೂರು ಬಂದಿದೆ. ಹಳದಿ ಪಡಿತರ ಚೀಟಿಯನ್ನು ಅವರಿಗೆ ಕೊಡುವುದನ್ನು ತಡೆಹಿಡಿಯಲಾಗಿದೆ. ಇವುಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಬಂದಿದೆ.

ಹಾವೇರಿ ತಾಲ್ಲೂಕಿನಲ್ಲಿ ಹಳದಿ ಪಡಿತರ ಚೀಟಿಯೋಜನೆಯಡಿ ಮನೆಮನೆ ಸಮೀಕ್ಷೆಯಲ್ಲಿ ಬಿಟ್ಟು ಹೋಗಿದ್ದ ಅರ್ಹ ಫಲಾನುಭವಿಗಳು ಹೊಸದಾಗಿ ಅರ್ಜಿಯನ್ನು ಸಲ್ಲಿಸಲು ದಿ: 16.6.2003ರವರೆಗೆ ಕಾಲಾವಕಾಶವನ್ನು ನೀಡಲಾಗಿತ್ತು. ಈ ಅವಧಿಯಲ್ಲಿ 31,577 ಅರ್ಜಿಗಳು ಬಂದಿದ್ದು ಅರ್ಜಿದಾರರ ನೈಜತೆಯನ್ನು ಪರಿಶೀಲಿಸಿ ಎಲ್ಲ ಅರ್ಹ ಕುಟುಂಬಗಳಿಗೂ ಹಳದಿ ಪಡಿತರ ಚೀಟಿಯನ್ನು 2.10.2003ರ ಒಳಗೆ ವಿತರಿಸಲಾಗುವುದು.

ಹಾವೇರಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ರೇಷನ್ ಅಂಗಡಿಗಳು

3244 (3693) ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾವೇರಿ ತಾಲ್ಲೂಕಿನಲ್ಲಿ ಮಂಜೂರು ಮಾಡಲಾಗಿರುವ ರೇಷನ್ ಅಂಗಡಿಗಳ ಸಂಖ್ಯೆ ಎಷ್ಟು;

ಆ) ಸದರಿ ತಾಲ್ಲೂಕಿನ ಎಷ್ಟು ಗ್ರಾಮಗಳಲ್ಲಿ ರೇಷನ್ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ;

ಇ) ಈ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಇನ್ನೂ ರೇಷನ್ ಅಂಗಡಿಗಳನ್ನು ಮಂಜೂರು ಮಾಡುವ ಅಗತ್ಯತೆ ಕಂಡುಬಂದಿದೆಯೇ;

ಬಂದಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 62

ಆ) 40 ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ.

ಇ) ಹೌದು.

ಹಳದಿ ಪಡಿತರ ಚೀಟಿ ವಿತರಣೆ ಕಾರ್ಯ ಕೈಗೊಂಡಿರುವುದರಿಂದ ಹಾಗೂ ಪಡಿತರ ಚೀಟಿಗಳ ಮಾಹಿತಿಯನ್ನು ಗಣಕೀಕರಣಕ್ಕೆ ಒಳಪಡಿಸುತ್ತಿರುವುದರಿಂದ ಈ ಕಾರ್ಯ ಮುಕ್ತಾಯದ ನಂತರ, ಹೊಸ ನ್ಯಾಯಬೆಲೆ ಅಂಗಡಿ ಮಂಜೂರಾತಿ ಕಾರ್ಯವನ್ನು ಪ್ರಾರಂಭಿಸಲಾಗುವುದು.

ತಿಮ್ಮಾಪುರ ಲಿಫ್ಟ್ ಇರಿಗೇಷನ್ ಕಾರ್ಯ ಪ್ರಗತಿ

3245 (3722) ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿಮ್ಮಾಪುರ ಲಿಫ್ಟ್ ಇರಿಗೇಷನ್ ಯೋಜನೆ ಬಜೆಟ್‌ನಲ್ಲಿ ಬಂದಿದ್ದು ಇಲ್ಲಿಯವರೆಗೂ ಈ ಯೋಜೆ ಮಂಜೂರು ಆಗದಿರಲು ಕಾರಣವೇನು:

ಆ) ಈ ಯೋಜನೆಯ ಅಂದಾಜು ಮೊತ್ತವೆಷ್ಟು ಹಾಗೂ ಸದರಿ ಯೋಜನೆಯಿಂದ ಎಷ್ಟು ಎಕರೆ ಜಮೀನು ನೀರಾವರಿ ಸೌಲಭ್ಯಕ್ಕೆ ಒಳಪಡುತ್ತದೆ.

ಇ) ಸದರಿ ಯೋಜನೆಯನ್ನು ಮಂಜೂರು ಮಾಡಲಿಕ್ಕೆ ಸರ್ಕಾರಕ್ಕಿರುವ ತೊಂದರೆಗಳೇನು: ಮತ್ತೆ ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ತಿಮ್ಮಾಪುರ ಏತ ನೀರಾವರಿ ಯೋಜನೆಯ ವರದಿಯನ್ನು ರೂ. 2164.00 ಲಕ್ಷ ಮೊತ್ತಕ್ಕೆ ತಯಾರಿಸಿದ್ದು ಸದರಿ ಯೋಜನಾ ವರದಿಗೆ ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯು ಕೆಲವು ಷರತ್ತುಗೊಳಪಟ್ಟು ದಿನಾಂಕ 28.12.2002ರಂದು ಅನುಮೋದನೆ ನೀಡಿರುತ್ತದೆ. ಸದರಿ ಷರತ್ತುಗಳಿಗೆ ಅನುಪಾಲನಾ ವರದಿಯನ್ನು ಸಿದ್ದಪಡಿಸಿ ವಿಷಯವನ್ನು ಬರುವ ಭಾರಿ ನೀರಾವರಿ ಯೋಜನೆಗಳ ನಿಯಂತ್ರಣಾ ಮಂಡಳಿಯ (ಎಂ.ಐ.ಪಿ.ಸಿ) ಮುಂದೆ ಮಂಡಿಸಬೇಕಾಗಿದ್ದು, ತದನಂತರ ಆಡಳಿತ ಅನುಮೋದನೆ ನೀಡಬೇಕಾಗಿರುತ್ತದೆ.

ಆ) ಈ ಯೋಜನೆಯ ಅಂದಾಜು ಮೊತ್ತ ರೂ. 2164.00 ಲಕ್ಷಗಳು. ಸದರಿ ಯೋಜನೆಯಿಂದ ಒಟ್ಟು 4176 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿದೆ.

ಇ) ನೀರಾವರಿ ಯೋಜನೆಗಳ ತಾಂತ್ರಿಕ ಸಲಹಾ ಸಮಿತಿಯು ದಿನಾಂಕ 28.12.2002 ರಂದ ನಡೆದ 72ನೇ ಸಭೆಯಲ್ಲಿ ಈ ಯೋಜನೆಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಅನುಮೋದನೆ ನೀಡಿದ್ದು ಸದರಿ ಷರತ್ತುಗಳಿಗೆ ಅನುಪಾಲನಾ ವರದಿಯನ್ನು ಸಿದ್ದಪಡಿಸಿ ಮುಂಬರುವ ಬೃಹತ್ ನೀರಾವರಿ ಯೋಜನೆಗಳ ಮಂಡಳಿಯು (ಎಂ.ಐ.ಪಿ.ಸಿ) ಅನುಮೋದಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು.

ಅಪ್ಪರ್ ತುಂಗಾ ಯೋಜನೆಯ ಕಾರ್ಯ ಪ್ರಗತಿ

3246 (3723) ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಪ್ಪರ್ ತುಂಗಾ ಯೋಜನೆಯ ಅಂದಾಜು ಮೊತ್ತವೆಷ್ಟು?

ಆ) ಈ ಯೋಜನೆಯಿಂದ ಎಷ್ಟು ತಾಲ್ಲೂಕುಗಳಿಗೆ ನೀರಾವರಿ ಸೌಲಭ್ಯ ಒದಗಲಿದೆ; ತಾಲ್ಲೂಕುವಾರು, ಕ್ಷೇತ್ರವಾರು ಮಾಹಿತಿ ನೀಡುವುದು:

ಇ) ಸದರಿ ಯೋಜನೆಗೆ ಇಲ್ಲಿಯವರೆಗೂ ಹಾವೇರಿ ತಾಲ್ಲೂಕಿನಲ್ಲಿ ಸರ್ವೇ ಮಾಡಿರುವುದಿಲ್ಲ. ಸರ್ವೇಯನ್ನು ಯಾವಾಗ ಮಾಡಲಾಗುವುದು:

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ. 1052.33 ಕೋಟಿಗಳು.

ಆ) ಈ ಯೋಜನೆಯಿಂದ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ತಾಲ್ಲುಕು, ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ಹರಿಹರ ತಾಲ್ಲುಕು ಹಾಗೂ ಹಾವೇರಿ ಜಿಲ್ಲೆಯ ಹಿರೇಕೆರೂರು, ರಾಣಿಬೆನ್ನೂರು,